936 ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಚಾವತ್ ತೀರ್ಪಿನ ಅನ್ವಯ ರಾಜ್ಯದ ಪಾಲಿಗೆ ಗೋದಾವರಿ ಜಲಾನಯನ ಪ್ರದೇಶದಿಂದ ಎಷ್ಟು ಟಿ ಎಂ ಸಿ ನೀರು ದೊರಕುತ್ತದೆ, ಈ ನೀರಿನಿಂದ ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕುತ್ತದೆ,

ಆ) ನಮ್ಮ ರಾಜ್ಯದ ಪಾಲಿಗೆ ಬರುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ, ಇದಕ್ಕಾಗಿ ಎಷ್ಟು ಹಣವನ್ನು ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಮೀಸಲಾಗಿಡಲಾಗಿತ್ತು,

ಇ) ನಿಗದಿತ ಸಮಯದಲ್ಲಿ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಲು ಸರ್ಕಾರ ರೂಪಿಸಿರುವ ಯೋಜನೆಗಳೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಬಚಾವತ್ ತೀರ್ಪಿನ ಅನ್ವಯ ರಾಜ್ಯದ ಪಾಲಿಗೆ ಗೋದಾವರಿ ಜಲಾನಯನ ಪ್ರದೇಶದಿಂದ 22 37 ಟಿ ಎಂ ಸಿ ನೀರನ್ನು ಉಪಯೋಗಿಸಿ ಕೊಳ್ಳಬಹುದಾಗಿದೆ ಈ ನೀರಿನಿಂದ ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ ಈ ಕೆಳಗೆ ವಿವರಿಸಿರುವಂತೆ ನೀರಾವರಿ ಸೌಲಭ್ಯ ದೊರಕುತ್ತದೆ

ನೀರಾವರಿ ಸೌಲಭ್ಯ ಎಕರೆಗಳಲ್ಲಿ

ಯೋಜನೆ	ಭಾಲ್ಕಿ ತಾ	ಔರಾದ್ ತಾ	ಬೀದರ್ ತಾ	ಬಸವಕಲ್ಯಾಣ ತಾ
ಕಾರಂಜಾ	58,000		30,000	----
ಚುಲಕಿನಾಲಾ	8 000		---	2,000
ಮಾಂಜ್ರಾ ನದಿಗೆ ಅಡ್ಡಲಾಗಿ ಬ್ಯಾರೇಜುಗಳು				
1 ಜಿರಗಿಹಾಳ್ 2 ಮಣಿಕೇಶ್ವರ 3 ಚಂದಾಪೂರ	7,336			
4 ಹಾಲಹಳ್ಳಿ		5,706		

ಸಣ್ಣ ನೀರಾವರಿ ಯೋಜನೆಗಳಡಿ ಈ ಕೆಳಗಿನಂತೆ ನಿರಾವರಿ ಸೌಲಭ್ಯ ದೊರಕುತ್ತದೆ

ನೀರಾವರಿ ಸೌಲಭ್ಯ ಎಕರೆಗಳಲ್ಲಿ

	ಔರಾದ್ ತಾ	ಬೀದರ್ ತಾ	ಬಾಲ್ಕಿ ತಾ	ಹುಮನಬಾದ್ ತಾ	ಬಸವಕಲ್ಯಾಣ ತಾ
ಈಗಾಗಲೇ ಕಲ್ಪಿಸಲಾಗಿರುವ ನೀರಾವರಿ	24,137	14,813	6,012	3,715	3,248
ಕಲ್ಪಿಸಬಹುದಾದ ನೀರಾವರಿ ಕ್ಷೇತ್ರ (ಅಂದಾಜಿನಂತೆ)	21,415	2,297	3,125	1,741	99

ಆ) ಗೋದಾವರಿ ಜಲವಿವಾದ ನ್ಯಾಯಮಂಡಳಿಯ ನಿರ್ಣಯದ ಪ್ರಕಾರ ಕರ್ನಾಟಕಕ್ಕೆ 22 37 ಟಿಎಂಸಿ ನೀರು ಲಭ್ಯವಾಗಿದ್ದು ಈ ಕೆಳಗೆ ವಿವರಿಸಿರುವಂತೆ ಉಪಯೋಗಿಸಿಕೊಳ್ಳಲು ಉದ್ದೇಶಿಸಲಾಗಿತ್ತು

1 ಕಾರಂಜಾ ಯೋಜನೆ 13 10 ಟಿಎಂಸಿ

2 ಚುಳ್ಳಿನಾಲಾ ಯೋಜನೆ , 1 17 ಟಿಎಂಸಿ

3 ಮಾಂಜ್ರಾ ಏತ ನೀರಾವರಿ 1 00 ಟಿಎಂಸಿ

ಸಣ್ಣ ನಿರಾವರಿಯಡಿಯಲ್ಲಿ

4 ನಿಜಾಂ ಸಾಗರ ಕೆಳಗಿನ ಕರ್ನಾಟಕ ಜಲಾನಯನ ಪ್ರದೇಶದಲ್ಲಿ ಉಪಯೋಗಕ್ಕಾಗಿ — 2 50 ಟಿಎಂಸಿ

5 ಸಣ್ಣ ನೀರಾವರಿ ಯೋಜನೆಗಳಿಗಾಗಿ — 4 60 ಟಿಎಂಸಿ

ಒಟ್ಟು 22 37 ಟಿಎಂಸಿ

ಈ ಮೇಲೆ ವಿವರಿಸಿರುವಂತೆ ಸಣ್ಣ ನೀರಾವರಿಯಡಿಯಲ್ಲಿ ಉಪಯೋಗಿಸಲು ಉದ್ದೇಶಿಸಿರುವ 7 10 ಟಿಎಂಸಿ ಯನ್ನು ಹೊರತುಪಡಿಸಿ ಭಾರಿ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ 15 27 ಟಿಎಂಸಿ ಉಪಯೋಗಿಸಬಹುದಾಗಿದೆ ಈ ಕೆಳಗೆ ವಿವರಿಸಿರುವಂತೆ ಈಗ ಯೋಜನಾವಾರು ಹಂಚಿಕೆ ಮಾಡಿದಂತೆ ಉಪಯೋಗಿಸಲು ಉದ್ದೇಶಿಸಲಾಗಿದೆ

1	ಕಾರಂಜಾ ಯೋಜನೆ	9 27 ಟಿಎಂಸಿ
2	ಚುಲ್ಕಿನಾಲಾ	1 17 ಟಿಎಂಸಿ
3	ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಲಾಗಿರುವ 4 ಬ್ಯಾರೇಜುಗಳಡಿಯಲ್ಲಿ	4 83 ಟಿಎಂಸಿ
	ಒಟ್ಟು	**15 27 ಟಿ ಎಂ ಸಿ**

ಕಾರಂಜಾ ಯೋಜನೆಗೆ ಡಿಸೆಂಬರ್ 2006ರ ವರೆಗೆ ರೂ 450 00 ಕೋಟಿ ವೆಚ್ಚ ಮಾಡಲಾಗಿದ್ದು ಬಾಕಿ ಕೆಲಸ ಪ್ರಗತಿಯಲ್ಲಿದೆ ಚುಳಕಿನಾಲಾ ಯೋಜನೆಗೆ ರೂ 70 82 ಕೋಟಿಗಳು ವೆಚ್ಚ ಮಾಡಲಾಗಿದ್ದು, ಯೋಜನೆಯು ಪೂರ್ಣಗೊಂಡಿರುತ್ತದೆ

ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ 4 ಬ್ಯಾರೇಜುಗಳಾದ ಜೀರಗಿಹಾಳ್, ಮಾಣಿಕೇಶ್ವರ್ ಮತ್ತು ಚಂದಾಪುರ ಇವುಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ರೂ 40 40 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದ್ದು, ಇಲ್ಲಿಯವರೆಗೆ ರೂ 4 51 ಕೋಟಿಗಳು ವೆಚ್ಚ ಮಾಡಲಾಗಿದೆ

ಪ್ರಸ್ತುತ 2006–07ನೇ ಸಾಲಿನಲ್ಲಿ ಕಾರಂಜಾ ಯೋಜನೆಗೆ ರೂ 44 40 ಕೋಟಿಗಳ ಅನುದಾನವಿದ್ದು, ಚುಳಕಿ ನಾಲಾಗೆ ಅನುದಾನ ಒದಗಿಸಿರುವುದಿಲ್ಲ

ಈ ಮೇಲೆ ವಿವರಿಸಿರುವಂತೆ ಸಣ್ಣ ನೀರಾವರಿಯಡಿಯಲ್ಲಿ ಉಪಯೋಗಿಸಲು ಉದ್ದೇಶಿಸಿರುವ 7 10 ಟಿಎಂಸಿ ಪೈಕಿ ಈಗ 4 687 ಟಿಎಂಸಿ ನೀರು ಬಳಕೆಯಾಗುತ್ತಿದೆ ಬಾಕಿ 2 413 ಟಿಎಂಸಿ ನೀರನ್ನು ಬಳಸಲು ಹೊಸ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ

ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಗೋದಾವರಿ ಕಣಿವೆಯಲ್ಲಿ ಒಟ್ಟು 7 10 ಟಿಎಂಸಿ ಬಳಸಬಹುದಾಗಿದ್ದು, ಈ ಪೈಕಿ 4 678 ಟಿಎಂಸಿ ಬಳಸಲಾಗಿದ್ದು,

ಈ ಕಾಮಗಾರಿಗಳಿಗೆ ಇಲ್ಲಿಯವರೆಗೆ ಸುಮಾರು ರೂ 30 00 ಕೋಟಿಗಳು ವೆಚ್ಚವಾಗಿದೆ ಉಳಿದ 2 413 ಟಿಎಂಸಿ ನೀರು ಬಳಸಿಕೊಳ್ಳುವ ಉದ್ದೇಶ ದೊಂದಿಗೆ 73 ಕಾಮಗಾರಿಗಳ ರೂಪರೇಷೆ ತಯಾರಿಸಲಾಗಿದೆ ಅವುಗಳ ಪೈಕಿ 26 ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಇಲಾಖೆಯು ಪೂರಕ ಅನುದಾನ ಒದಗಿಸಲು ತಾತ್ವಿಕವಾಗಿ ಒಪ್ಪಿದ್ದು, ಈ ಅನುದಾನದಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ

ಇ) ಭಾರಿ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ 15 27 ಟಿಎಂಸಿ ಬಳಸಿಕೊಳ್ಳಬೇಕಾಗಿದ್ದು, ಚುಳಕಿನಾಲಾ ಯೋಜನೆಯಲ್ಲಿ ಈಗಾಗಲೇ 1 17 ಟಿಎಂಸಿ ಬಳಸಿಕೊಳ್ಳಲಾಗಿದ್ದು, ಕಾರಂಜಾ ಯೋಜನೆಯಡಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2007ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, 9 27 ಟಿಎಂಸಿ ಬಳಸಲಾಗುವುದು

ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ 4 ಬ್ಯಾರೇಜುಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಬ್ಯಾರೇಜುಗಳು ಪೂರ್ಣಗೊಂಡ ನಂತರ 4 80 ಟಿಎಂಸಿ ನೀರು ಬಳಸಲಾಗುತ್ತದೆ

ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 7 ಕಾಮಗಾರಿಗಳು ನಬಾರ್ಡ್ ಸಹಾಯ ಧನದಡಿ ಸೇರಿವೆ ಅಲ್ಲದೇ ಮೇಲೆ ತಿಳಿಸಿರುವಂತೆ 26 ಕಾಮಗಾರಿಗಳನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ, ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಗೋದಾವರಿ ಕಣಿವೆಯಲ್ಲಿ ಒಟ್ಟು 7 10 ಟಿಎಂಸಿ ಬಳಸಬಹುದಾಗಿದ್ದು, ಈ ಪೈಕಿ 4 678 ಟಿಎಂಸಿ ಬಳಸಲಾಗಿದ್ದು, ಈ ಕಾಮಗಾರಿಗಳಿಗೆ ಇಲ್ಲಿಯವರೆಗೆ ಸುಮಾರು ರೂ 30 00 ಕೋಟಿಗಳು ವೆಚ್ಚವಾಗಿದೆ ಉಳಿದ 2 413 ಟಿಎಂಸಿ ನೀರು ಬಳಸಿಕೊಳ್ಳುವ ಉದ್ದೇಶದೊಂದಿಗೆ 73 ಕಾಮಗಾರಿಗಳ ರೂಪರೇಷೆ ತಯಾರಿಸಿಕೊಳ್ಳಬೇಕಾಗಿದ್ದು ಕಾಮಗಾರಿಗಳನ್ನು ಅನುದಾನದ ಲಭ್ಯತೆಯ ಅನುಸಾರ ಕೈಗೊಂಡು ಸಣ್ಣ ನೀರಾವರಿ ಪಾಲಿಗೆ ಹಂಚಿಕೆಗೊಂಡಿರುವ ಪೂರ್ಣಪ್ರಮಾಣದ ನೀರನ್ನು ಬಳಸಿಕೊಳ್ಳಲು ಅಗತ್ಯ ಕ್ರಮವನ್ನು ಜರುಗಿಸಲಾಗುವುದು

566 ಶ್ರೀ ಕೃಷ್ಣ ಬೈರೇಗೌಡ ಸಿ ಬಿ ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಈ ಹಿಂದೆ ಪ್ರತಿ ಗ್ರಾಮ ಪಂಚಾಯಿತಿಗೆ 40 ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗಿದ್ದು